ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Monday, the 16th June 1980./Jyesta, 1902. S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which oral answers were given)

Libraries in the State

162. SRI M. GANGANNA (Kushtagi).—Will the Minister for Education be pleased to state:—

(a) the number of Libraries established by the Library Department in the State; out of which the number of Rural Libraries;

(b) the number of Libraries established in Raichur District, the proposed Libraries to be established in various places in this District during 1978-79 ;

(c) the number of employees in the Library Department, of them, the number of persons working on temporary or daily wage basis and from how many years ;

(d) whether employees of the Library Department have submitted many representations in this regard ; what immediate action the Government intend to take in the matter ?

SRI G.B. SHANKARA RAO (Minister for Education).—

(a) 330

210.

(b) 9.

During 19 8-79 the branch Libraries are opened at Gangavathi, Lingasugur, Kukanur, Munirabad and at Manvi. During the current and the next year it is proposed to open branch Libraries at Koppal, Yelburga, Mudagal, Sindhanur, Kushtagi and Devadurga.

(c) 972
46
6 years.

(d) Representations are given and they will be considered.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ ಗ್ರಾಮಾಂತರ ಗ್ರಂಥಾಲಯುಗಳ ಸಂಖ್ಯೆ ೨೧೦ ಎಂದು ಹೇಳಿದ್ದಾರೆ. ರಾಜಾರಾಮ್ ಮೊಹನರಾಯ್ ಫೌಂಡೇಷನ್ ಯೋಜನೆಯ ಕೆಳಗೆ ಎಷ್ಟು ಈ ಗ್ರಂಥಾಲಯಗಳನ್ನು ಸ್ಥಾಪನೆ ಮಾಡಲಾಗಿದೆ.

† ಶ್ರೀ ಜಿ.ಬಿ. ಶಂಕರ ರಾವ್.—ಆ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ನಾನು ಈ ಪ್ರಶ್ನೆ ಕೇಳಿದ್ದು ತಾ. ೨೯-೫-೧೯೬೮ರಲ್ಲಿ, ಈಗ ಉತ್ತರ ಬಂದಿದೆ. ಮತ್ತು ಅಲ್ಲಿಂದ ಇಲ್ಲಿಯವರೆಗೆ ಕೇವಲ ೯ ಗ್ರಂಥಾಲಯುಗಳನ್ನು ಸ್ಥಾಪಿಸಲಾಗಿದೆ. ಒಟ್ಟಿನಲ್ಲಿ ರಾಯಚೂರು ಜಿಲ್ಲೆಯನ್ನು ಪೂರ್ತಿಯಾಗಿ ನಿರ್ಲಕ್ಷಿಸಲಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ.ಬಿ. ಶಂಕರರಾವ್.—ನಿರ್ಲಕ್ಷ ಮಾಡಿಲ್ಲ. ಅಲ್ಲಿ ಇನ್ನೂ ಹೆಚ್ಚು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಈಗ ಕೊರತೆ ಇರುವುದನ್ನು ತುಂಬಿಕೊಡುತ್ತೇವೆ.

ಶ್ರೀ ಎಂ. ಗಂಗಣ್ಣ.—ಈಗ ಸ್ಟೇಟ್ ಲೈಬ್ರರಿ ಆಫಾರಿಟಿ ಎಂದು ಇನಿದೆ, ಆದರಲ್ಲಿ ನಮ್ಮ ಜಿಲ್ಲೆಗೆ ಸೂಕ್ತ ಪ್ರಾತಿನಿಧ್ಯವಿಲ್ಲದ ಕಾರಣ ಈ ರೀತಿ ಆಗಿದೆ. ಒಟ್ಟಿನಲ್ಲಿ ನಮ್ಮ ಜಿಲ್ಲೆ ಎಲ್ಲಾ ರಂಗಗಳಲ್ಲಿಯೂ ಹಿಂದುಳಿದಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಜನರು ದೂರು ಕೊಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ.ಬಿ. ಶಂಕರರಾವ್.—ಸ್ಟೇಟ್ ಲೈಬ್ರರಿ ಆಫಾರಿಟಿಯನ್ನು ಪುನರ್ ರಚನೆ ಮಾಡುವಾಗ ಆ ಭಾಗಕ್ಕೂ ಪ್ರಾತಿನಿಧ್ಯ ಕೊಡುತ್ತೇವೆ.

ಶ್ರೀ ಎಂ. ಗಂಗಣ್ಣ.—ಇಲ್ಲಿ ನಾನು ತಾತ್ಕಾಲಿಕ ಆಧಾರ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ೪೬ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಇವರುಗಳು ಈಗ ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿದ್ದಾರೋ ಅಥವಾ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದಾರೋ ಎಂಬುದನ್ನು ತಿಳಿಸಬೇಕು ?

ಶ್ರೀ ಜಿ.ಬಿ. ಶಂಕರರಾವ್ — ಈಗಾಗಲೇ ೨೬೧ ಜನ ದಿನಗೂಲಿ ಮೇಲೆ ಕೆಲಸ ಮಾಡುತ್ತಿದ್ದವರನ್ನು ಭರ್ತಿ ಮಾಡಿದ್ದೇವೆ. ಈಗ ೪೬ ಜನ ಡೈಲಿ-ವೇಜಸ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರನ್ನು ಇನ್ನೂ ಭರ್ತಿ ಮಾಡಬೇಕಾಗಿದೆ.

ಶ್ರೀ ಜಿ.ಎಸ್. ಶಿವಸಂಜಪ್ಪ —ರಾಜಾರಾಮ್ ಮೊಹನರಾಯ್ ಫೌಂಡೇಷನ್ ಯೋಜನೆ ಕೆಳಗೆ ಕೇಂದ್ರದಿಂದ ಬರತಕ್ಕಂಥ ಗ್ರಾಂಟ್ ಎಷ್ಟು ಮತ್ತು ಅದಕ್ಕೆ ನಮ್ಮ ಸರ್ಕಾರದವರು ಕೊಡುವ ಗ್ರಾಂಟ್ ಎಷ್ಟು ?

ಶ್ರೀ ಜಿ.ಬಿ. ಶಂಕರರಾವ್. —ಆ ವಿವರ ಇಲ್ಲಿ ಬೇರೆ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಜಿ.ಎಸ್. ಶಿವಸಂಜಪ್ಪ. —ಈ ಯೋಜನೆ ಕೆಳಗೆ ಬಕ್ಕಾಂಡರ ರೂಪಾಯಿಗಳಷ್ಟು ಹಣ ಲೂಟಿಯಾಗುತ್ತಿದೆ. ಈ ಯೋಜನೆಯ ಕೆಳಗೆ ಪಳ್ಳಿಗಳಿಗೆ ಮಾಡಿರುವ ಪುಸ್ತಕಗಳನ್ನು ಸಹ ಕಳುಹಿಸಿಲ್ಲ.

ಅಧ್ಯಕ್ಷರು. ಆ ಬಗ್ಗೆ ಸಮಾಜಿತಿ ಇಲ್ಲದೆಯೆ ಮಾನ್ಯ ಮಂತ್ರಿಗಳು ದೊಳರ ಮೇಲೆ ತಾವು ಬೇರೆ ಪ್ರಶ್ನೆ ಕಳುಹಿಸಿಕೊಡಬೇಕಾಗುತ್ತದೆ. ಆದಕಾರಣ ಈಗ ಆ ಬಗ್ಗೆ ವಾಪಸಿಯಾಗಬೇಡ.

† Indicates that remarks or speeches have not been revised by the member concerned.

ಶ್ರೀ ಜಿ.ಎಸ್. ಶಿವನಂಜಪ್ಪ.—ಈ ಯೋಜನೆ ಕೆಳಗೆ ಕೇಂದ್ರ ಸರ್ಕಾರದವರು ಮ್ಯಾಚಿಂಗ್ ಗ್ರಾಂಟ್ ಎಂದು ಕೊಡುತ್ತಿದ್ದಾರೆ. ಆ ಗ್ರಾಂಟ್‌ನಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಪುಸ್ತಕಗಳನ್ನು ತೆಗೆದುಕೊಂಡಿದ್ದಾರೆ. ಎಲ್ಲಾ ೫೦-೬೦ ರೂಪಾಯಿಗಳಷ್ಟು ಬೆಲೆ ಬಾಳುವ ಇಂಗ್ಲೀಷ್ ಪುಸ್ತಕಗಳನ್ನೇ ಕೊಂಡುಕೊಂಡು ಜಿಲ್ಲಾ ಕೇಂದ್ರಗಳಲ್ಲಿಯೇ ಇಟ್ಟುಕೊಂಡಿದ್ದಾರೆ. ಹಳ್ಳಿಗಳಿಗೆ ಬೇಕಾಗುವಂತಹ ಪುಸ್ತಕಗಳನ್ನು ಕೊಂಡು ಅಲ್ಲಿಗೆ ಕಳುಹಿಸಿಕೊಟ್ಟಿಲ್ಲ. ಇದರಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಹಣ ದುರ್ವ್ಯವಹಾರ ನಡೆದಿದೆ. ಆದಕಾರಣ ನಾನು ಪ್ರಶ್ನೆ ಕೇಳಿದ್ದು. ಇದರಲ್ಲಿ ಎಷ್ಟೆಷ್ಟು ಪುಸ್ತಕಗಳನ್ನು ಕೊಂಡಿದ್ದಾರೆ, ಆದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆಂದು ?

ಶ್ರೀ ಜಿ.ಬಿ. ಶಂಕರರಾವ್.—ಇದು ರಾಯಚೂರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರು ಜನರಲ್ ಆಗಿ ಪ್ರಶ್ನೆ ಕೇಳುತ್ತಿದ್ದಾರೆ. ಆದ ಕಾರಣ ಅವರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡಬಹುದು.

ಶ್ರೀ ಎಚ್. ಗಂಗಾಧರನ್.—ಈ ರಾಜಾರಾಮ್ ಮೋಹನರಾಯ್ ಫೌಂಡೇಷನ್ ಸ್ಥಾಪನೆಯಾದ ಮೇಲೆ ಎಷ್ಟು ಲಕ್ಷ ರೂಪಾಯಿಗಳ ಪುಸ್ತಕಗಳನ್ನು ಕೊಂಡುಕೊಳ್ಳಲಾಗಿದೆ ಮತ್ತು ಈ ೨೧೦ ಲೈಬ್ರರಿಗಳಿಗೆ ಎಷ್ಟು ಪುಸ್ತಕಗಳನ್ನು ಕಳುಹಿಸಿಕೊಡಲಾಗಿದೆ ಎಂಬುದನ್ನು ತಿಳಿಸುತ್ತೀರಾ ?

SRI G.B. SHANKARA RAO.—The hon. Member has asked a particular question for which I have given the answers. Now, he has aske- this question which requires detailed information. Let him put d separate question and I shall get the information and supply to him.

SRI H. GANGADHARAN.—You have stated that there are 210 rural libraries. Under what scheme these 210 libraries have been established ? and what was the amount spent ? The hon. Minister is selling that he did not have this information.

SRI G.B. SHANKARA RAO.—This break-up is not with me and the question which the hon. Member now asked requires lot of information to be collected. That is why I told the hon. Member to put another question. Anyway, I shall collect the information and pass it on to him.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಮಾನ್ಯ ಸಚಿವರು ಉತ್ತರ ಕೊಡುವಾಗ ದಿನಗೂಲಿ ಮತ್ತು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದವರನ್ನು ಕನ್‌ಫರ್ಮ್ ಮಾಡಲಾಗಿದೆ ಎಂದು ಹೇಳಿದರು. ಆದರೆ ಅಲ್ಲಿ ಇನ್ನೂ ೪೬ ಜನರನ್ನು ಕನ್‌ಫರ್ಮ್ ಮಾಡಿಲ್ಲ. ಇವರನ್ನು ಹಾವನೂರ್ ವರದಿ ಪ್ರಕಾರ ಕನ್‌ಫರ್ಮ್ ಮಾಡಲು ಬರುವುದಿಲ್ಲವೆಂದು ಹಾಗೆಯೇ ಬಿಟ್ಟಿದ್ದಾರೆಂದು ನನಗೆ ತಿಳಿದು ಬಂದಿದೆ. ಆದರೆ ಇವರುಗಳು ೬ ವರ್ಷಗಳಿಂದ ಕೆಲಸ ಮಾಡಿದ್ದಾರೆ ಮತ್ತು ಅಲ್ಲಿ ಕೆಲಸ ಮಾಡಲು ಬೇಕಾದ ಅರ್ಹತೆಯನ್ನು ಸಹ ಹೊಂದಿದ್ದಾರೆ. ಆದ ಕಾರಣ ಇಲ್ಲಿಯವರೆಗೆ ಮಾಡಿದ ಸರ್ವೀಸನ್ನು ಗಣನೆಗೆ ತೆಗೆದುಕೊಂಡು ಅವೊತ್ತಿನಿಂದಲೇ ಕನ್‌ಫರ್ಮ್ ಮಾಡಬೇಕು ಮತ್ತು ಹಾವನೂರ್ ವರದಿ ಪ್ರಕಾರ ಕನ್‌ಫರ್ಮ್ ಮಾಡದೆ ಬಿಡುವುದು ಸರಿಯಲ್ಲವೆಂದು ಹೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಜಿ.ಬಿ ಶಂಕರರಾವ್.—ಇಲ್ಲಿ ವಯೋಮಿತಿಯನ್ನು ದಾಟಿದವರ ಬಗ್ಗೆ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ.